ನೀನೇ ಒಂದು ದಿನ ಅವರ ಮನೆಗೆ ಹೋಗಿ ಆ ಹೆಣ್ಣನ್ನು ಕರೆದು ತರುವ ಬಗ್ಗೆ ಒಂದು ದಿನವನ್ನು ಗೊತ್ತು ಮಾಡು' ಎಂದು ಹೇಳಿತು.

'ನಿನ್ನ ಸಲಹೆ ಸೂಕ್ತವಾಗಿದೆ' ಎಂದನು ಆತ. ನಂತರ ಹೀಗೆ ಹನ್ನೆರಡು ದಿನಗಳು ಕಳೆದವು. ಆತ ಕಪ್ಪೆಯನ್ನು ಕರೆದು ಅದಕ್ಕೆ ಹೀಗೆ ಹೇಳಿದ: 'ನನಗಾಗಿ ಆ ವಧುವನ್ನು ಕರೆದು ತರಲು ನನಗೆ ಜನರು ಬೇಕಾಗಿದ್ದಾರೆ. ಆದರೆ ಅಂಥ ಜನರನ್ನು ನಾನು ಪತ್ತೆ ಹಚ್ಚಲಾರೆ. ಕೇಳಿದರೆ ಎಲ್ಲರೂ, 'ನಾವೂ ಆಗಸಕ್ಕೆ ಹೋಗುವುದಕ್ಕೆ ಸಾಧ್ಯವಾಗಲ್ಲ' ಅಂತಾರೆ. ಈಗ ನಾನೇನು ಮಾಡಲಿ ಕಪ್ಪೆ?' ಎಂದು ಕೇಳಿದನು.

ಆದರೆ ಕಪ್ಪೆ ಮತ್ತೆ ಆತನಿಗೆ, 'ಸ್ನೇಹಿತನಾದ ಯುವಕನೇ, ಅದು ತುಂಬಾ ಸುಲಭ. ನೀನು ತುಂಬಾ ತೊಂದರೆ ತೆಗೆದುಕೊಳ್ಳಬೇಡ. ನಾನು ಅಲ್ಲಿಗೆ ಹೋಗಿ ಆಕೆಯನ್ನು ನಿನಗಾಗಿ ಕರೆತರುವುದರ ಬಗೆ ಹೇಗೆ ಎಂಬುದರ ದಾರಿಯನ್ನು ಪತ್ತೆ ಹಚ್ಚುತ್ತೇನೆ' ಎಂದು ಹೇಳಿತು. ಆಗ ಆತ, 'ನಿನ್ನಿಂದ ಅದು ಆಗಲ್ಲ ಬಿಡು. ನೀನು ಕಾಗದವನ್ನೇನೋ ನಿಜವಾಗಿಯೂ ತಲುಪಿಸಿದೆ. ಆದರೆ ನೀನು ವಧುವನ್ನು ಮಾತ್ರ ನನ್ನ ಮನೆಗೆ ಕರೆತರಲಿಲ್ಲ. ಅದು ನಿನ್ನ ಕೈಯಿಂದ ಆಗದು' ಎಂದ.

ಕಪ್ಪೆ ಆತನಿಗೆ, 'ಯುವ ಮನುಷ್ಯನೇ, ನೀನು ತೊಂದರೆ ತಗೋ ಬೇಡ. ನಾನು ನಿಜವಾಗಿಯೂ ಹೋಗಿ ಆಕೆಯನ್ನು ಮನೆಗೆ ತರಲು ಶಕ್ತನಾಗಿದ್ದೇನೆ. ನೀನು ನನ್ನನ್ನು ತಿರಸ್ಕರಿಸಬೇಡ' ಎಂದು ಮತ್ತೆ ಹೇಳಿತು.

ಆಗ ಆತ ಕಪ್ಪೆಯ ಈ ಮಾತಿಗೆ, 'ಒಳ್ಳೇದು. ನಾನೂ ನಿನಗಾಗಿ ಪ್ರಯತ್ನಿಸುತ್ತೇನೆ' ಎಂದು ಹೇಳಿತು. ಕಪ್ಪೆಗೆ ಉಪಾಹಾರ ಕೊಟ್ಟು ಬೀಳ್ಕೊಟ್ಟನು.

ಕಪ್ಪೆ ಅಲ್ಲಿಂದ ಹೊರಟಿತು. ಬೇಗ ಬೇಗನೆ ಬಾವಿಗೆ ಬಂದಿತು. ಬಾವಿಯೊಳಕ್ಕೆ ಹೋಗಿ ನೀರಿನ ತಳದಲ್ಲಿ ಅಡಗಿಕೊಂಡಿತು. ಎಂದಿನಂತೆ ಆಗಸದಿಂದ ಹುಡುಗಿಯರು ನೀರು ತೆಗೆದುಕೊಂಡು ಹೋಗಲು ಬಂದರು; ಎಂದಿನಂತೆ ಅಂದೂ ಕಪ್ಪೆ ಅವರ ಒಂದು ಕೊಡದಲ್ಲಿ ಕೂತು ಆಗಸಕ್ಕೆ ಹೋಯಿತು. ಅಲ್ಲಿ ಹುಡುಗಿಯರು ಕೊಡಗಳನ್ನು ಮಾಮೂಲು ಜಾಗದಲ್ಲಿಟ್ಟು ಹೊರಗೆ ಹೋದರು.

ಸೂರ್ಯ ಮುಳುಗಿ ಸಂಜೆಯಾಗಿ ಕತ್ತಲೆಯಾಗಿ ರಾತ್ರಿಯಾಯಿತು. ಕಪ್ಪೆ ಕೊಡದಿಂದ ಎದ್ದು ಹೊರಗೆ ಬಂದು ಸೂರ್ಯನ ಮಗಳು ಎಲ್ಲಿ ಮಲಗಿದ್ದಾಳೆಂಬುದನ್ನು ಹುಡುಕಿಕೊಂಡು ಹೊರಟಿತು! ಆಕೆ ಕೊಠಡಿಯಲ್ಲಿ ಮಲಗಿ ನಿದ್ದೆ ಮಾಡುತ್ತಿರುವುದು ಕಪ್ಪೆಗೆ ಕಂಡಿತು. ಅವಳ ಬಳಿಗೆ ಮೆಲ್ಲನೆ ಹೋಗಿ ಕರವಸ್ತ್ರದಿಂದ ಆಕೆಯ ಕಣ್ಣುಗಳನ್ನು ಬಿಗಿಯಾಗಿ ಕಟ್ಟಿ, ನಂತರ ಅಲ್ಲಿಂದ ಮರಳಿ ತನ್ನ ರೂಮಿಗೆ ಬಂದು ಮೂಲೆಯಲ್ಲಿ ಅಡಗಿ ಕುಳಿತಿತು.

ಬೆಳಗಾಯಿತು. ಜನರೆಲ್ಲಾ ನಿದ್ದೆಯಿಂದ ಎದ್ದಿದ್ದರು. ಆದರೆ ಸೂರ್ಯ ದೇವನ ಮಗಳು ಮಾತ್ರ ಎದ್ದಿರಲಿಲ್ಲ. ಆಗ ಅವರು ಆಕೆಯನ್ನು ಕೇಳಿದರು.

'ಯಾಕೆ ನೀನು ಇನ್ನೂ ಎದ್ದಿಲ್ಲ?'

'ನನ್ನ ಕಣ್ಣುಗಳು ಮುಚ್ಚಿ ಹೋಗಿವೆ. ನನಗೆ ನೋಡಲು ಆಗುತ್ತಿಲ್ಲ' ಎಂದಳು ಸೂರ್ಯನ ಮಗಳು. ಆಗ ಅವಳ ತಂದೆ ತಾಯಿ ಹೇಳಿದರು: 'ಇದು ಹೇಗಾಯ್ತು? ಆದರೆ ನಿನ್ನೆ ದಿನ ಅವಳು ನಮಗೆ ಯಾವ ದೂರನ್ನೂ ಹೇಳಲಿಲ್ಲವಲ್ಲಾ'. ಸೂರ್ಯದೇವ ತಕ್ಷಣ ಇಬ್ಬರು ದೂತರನ್ನು ಕೂಗಿ ಕರೆದು, 'ನೀವು ಕೂಡಲೇ ನೆಗೊಂಬೋನ ಬಳಿಗೆ ಹೋಗಿ ನನ್ನ ಮಗಳಿಗೆ ಬಂದಿರುವ ಈ ಕಾಯಿಲೆಯ ಬಗ್ಗೆ ಕೇಳಿ; ಯಾಕೆ ಅವಳು ಕಣ್ಣುಗಳು ರೋಗಕ್ಕೆ ತುತ್ತಾಗಿವೆ ಎಂಬುದರ ಬಗ್ಗೆ ವಿಚಾರಿಸಿಕೊಂಡು ಬನ್ನಿ' ಎಂದು ಆದೇಶಿಸಿದನು.

ಇಬ್ಬರು ದೂತರು ಮತ್ತು ಕೆಲವು ಜನರು ತುರ್ತಾಗಿ ನೆಗೊಂಬೋನ ಮನೆಗೆ ಹೋಗಿ ಭೇಟಿ ಮಾಡಿದರು. ನೆಗೊಂಬೋ ಮದುವೆಗೆ ಸಂಬಂಧಿಸಿದ ತನ್ನ ಪಂಚಾಂಗದ ಸಾಮಗ್ರಿಯನ್ನು ಹೊರ ತೆಗೆದನು. ಆದರೆ ಆ ದೂತರು ಆ ಹುಡುಗಿ ಕಣ್ಣುಗಳ ಕಾಯಿಲೆಯ ಬಗ್ಗೆ ಹೇಳದೆ, ತಾವು ಅವನಿಂದ ಆಶೀರ್ವಾದ ಪಡೆಯಲು ಬಂದಿರುವುದಾಗಿ ಸುಳ್ಳು ಹೇಳಿದರು.

ನೆಗೊಂಬೊ ಹೊರತೆಗೆದ ತನ್ನ 'ಸಾಮಗ್ರಿ'ಯ ನೋಡುತ್ತಾ, 'ಕಣ್ಣುಕಾಯಿಲೆ ಬಂದಿರುವ ಒಂದು ಹೆಣ್ಣು ನಿಮ್ಮನ್ನು ಇಲ್ಲಿಗೆ ಬರುವಂತೆ ಮಾಡಿದೆ. ನಿಮ್ಮನ್ನು ಯಾರೋ ಇಲ್ಲಿಗೆ ಕಳಿಸಿದ್ದಾರೆ. ಆದರೆ ನೀವಾಗಿಯೇ ಇಲ್ಲಿಗೆ ಬಂದಿಲ್ಲ' ಎಂದು ಹೇಳಿದನು.

ಆಗ ಜನರು 'ನೀವು ಹೇಳುವುದು ನಿಜ. ಈಗ ಈ ರೋಗವನ್ನು ವಾಸಿ ಮಾಡುವುದು ಹೇಗೆ ಎಂಬುದನ್ನು ತಾವು ಹೇಳಿ' ಎಂದು ಕೇಳಿದರು.